ಕೇಳಿದಷ್ಟು ದುಡ್ಡು ಬಂಗಾರ ಹೆಂಗಾರ ತಂದು ಕೊಡ್ತೀನಿ. ನಿಮ್ಮ ಕಾಲು ಮುಗೀತಿನಿ ಇದೊಂದು ಮಾಡ್ಲಿ ಸಾರ್. ತಾಯಿಯಿಲ್ಲದ ತಬ್ಬಲಿ ಹುಡುಗಿ ಅಂದ್ರು ಕಣೋ ಹಂಗಾಗಿ ನಾನವತ್ತು ಎಮೋಶನಲ್ ಆದೆ.

ಆಮೇಲೆ ಇವ್ರು ಭಾಷೆ ಸಾಬ್ರದಲ್ಲ ಕಂಡ್ಲೆ. ಇದಕ್ಕೆ ಸ ಭಾಷೆ ಅಂತಾರೆ. ಅಂದ್ರೆ ಎಲ್ಲದಕ್ಕೂ ಸ ಸೇರಿಸಿ ಮಾತಾಡ್ತಾರೆ. ಉಪ್ಪಿಟ್ಟಿಗೆ, ಉಸಿಪ್ಪಿಟ್ಟು, ಊಟಕ್ಕೆ ಉಸೂಟ ಅಂತಾರೆ. ನಿಮ್ಮವ್ವನಿಗೆ ಅದು ಸಾಬ್ರು ಮಾತ್ನಂಗೆ ಕೇಳಿಸಿದೆ. ಇವ್ರು ಒಳ್ಳೆ ಹುಡುಗಿ ಕಣೋ. ಎಲ್ಲಾ ನಿಭಾಯಿಸಿಕೊಂಡು ಹೋಗೋ ಗುಣ ಐತಂತೆ. ಎಲ್ಲಾ ಕಡೆ ವಿಚಾರಿಸಿದ ಮೇಲೇನೆ ನಿಂಗೆ ಜುಲ್ಮೆ ಮಾಡಿದ್ದು. ಮಿತ್ರನಿಗೆ ಮೋಸ ಮಾಡ್ತಿವೇನ್ಲೇ ದಡ್ಡ. ನಡೀ ಅವ್ವನ ಕರ್ಕೊಂಡು ಹುಡುಗಿ ನೋಡು. ನೀನು ಒಪ್ಪೇ ಒಪ್ತಿಯಾ" ಎಂದು ತಣ್ಣಗೆ ಎಲ್ಲಾ ಕಥೆ ಹೇಳಿದನು.

ಗುಡ್ಡಪ್ಪನಿಗೆ ತಲೆಯ ಮೇಲಿದ್ದ ಬೆಟ್ಟ ಇಳಿಸಿದಷ್ಟೇ ಹಗುರಾಯಿತು. ಗಂಗವ್ವ ಕಣ್ಣು ಬಾಯಿ ಬಿಟ್ಟುಕೊಂಡು ನಿಂತಳು. "ಆ ಸವತೀಗೆ ಮಕ್ಕಳೆಷ್ಟು ಅದಾರಂತಪ್ಪ" ಎಂದು ಒಂದೇ ಸರಳ ಪ್ರಶ್ನೆ ಕೇಳಿದಳು. "ಎಷ್ಟಾನಾ ಇರ್ಲಿ. ಅದನ್ನ ಕಟ್ಕೊಂಡು ನೀಯೇನ್ ಮಾಡಿಯಬ್ಬೆ ನಡೀ ಕನ್ಯಾ ನೋಡಾನ. ದುಡ್ಡು ಕಾಸು ಅವರೆಷ್ಟು ಕೊಡ್ತಾರೋ ಅಷ್ಟಕ್ಕೆ ಹ್ಞೂ ಅನ್ನು. ಜಾಸ್ತಿ ಕೊಸರಬೇಡ" ಎಂದು ತಾಯಿಗೆ ಗುಡ್ಡಪ್ಪ ತುಸು ಸಿಡುಕಲ್ಲೇ ಹೇಳಿದನು. "ಅಗಳಪ್ಪ ಮೂಗುತಿ ಬರೋಕೆ ಮೊದ್ಲಾ ಅವ್ವುನ್ನ ನಡು ದಾರೀಲೆ ಕೈ ಬಿಟ್ನಲ್ಲೋ ಈ ಕಿಸ್ಬಾಣಿ ಮಗ. ಈಗ್ಲೇ ಮಾವನ ಮನೀ ಕಡೆ ವಕಾಲತ್ತು ಸುರುವಾತಲ್ಲೋ ಇವುನ್ದು" ಎಂದು ಗಂಗವ್ವ ಒಸಿ ಒಗರಿನಿಂದಲೇ ಝಾಡಿಸಿದಳು. ಕೊನೆಗೆ ಮದುವೆ ಅಖೈರಾಯಿತು.

ಮದುವೆ ದಿನ ಹುಡುಗಿ ಬಂಗಾರದ ವಂಕಿ, ಡಾಬು, ಬೈತಲೆ ಬಟ್ಟು ಎಲ್ಲಾ ಹಾಕಿ ಸಿಂಗರಿಸಿಕೊಂಡಿದ್ದಳು. ಕೇಳದೆಯೂ ಇಷ್ಟು ಬಂಗಾರ ಜಡದಾರ ಬಿಡೂಂತ ಗುಡ್ಡಪ್ಪ ಖುಷಿಯಾಗಿ ಮುಹೂರ್ತ, ಆರತಕ್ಷತೆ ಎಲ್ಲಾ ಮುಗಿಸಿಕೊಂಡನು. ಮಧ್ಯಾಹ್ನದ ಊಟ ಮುಗಿಯುವ ಹೊತ್ತಿಗೆ ಹಳೆ ಸಂದೂಕ ಹಿಡಿದುಕೊಂಡು ತುಟಿಗೆ ಬಣ್ಣ ಮೆತ್ತಿಕೊಂಡಿದ್ದ ಹೆಣ್ಣೊಬ್ಬಳು ಬಂದು ನಿಂತಳು. ಗುಡದಪ್ಪ 'ತನ್ನಮಾವನ ಎರಡನೇ ಹೆಂಡತಿ ಇವಳೇ ಇರಬಹುದಾ? ಟ್ರಂಕಿನ ತುಂಬ ಏನಾದರೂ ಅಷ್ಟೈಶ್ವರ್ಯ ತಂದಿರಬಹುದಾ' ಎಂದು ಆಸೆ ಕಂಗಳಿಂದ ನೋಡುತ್ತಿದ್ದನು. ಬಂದವಳು, "ಮದುವೆ ಕಾರ್ಯ ಮುಗೀತಲ್ಲ. ಬೇಗ ಬಿಚ್ಚಿ ಕೊಡ್ರೀ ಟೈಮಾಗುತ್ತೆ" ಎಂದು ನವವಧು ಹೇರಿಕೊಂಡಿದ್ದ ಪಾಸಿ ಬಂಗಾರದ ಒಡವೆಗಳನ್ನೆಲ್ಲಾ ಬಿಚ್ಚಿಸಿಕೊಂಡು, ಇನ್ನೂರು ರೂಪಾಯಿ ಬಾಡಿಗೆ ವಸೂಲಿ ಮಾಡಿ ಹೊರಟೇ ಹೋದಳು.

## ಕಲೀಮ್ ಉಲ್ಲಾ

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರಾದ ಕಲೀಮ್ ಕತೆ, ಪ್ರಬಂಧ, ಅಂಕಣ ಬರಹಗಳನ್ನು ಬರೆದುಕೊಂಡು ಬಂದಿದ್ದಾರೆ. 'ಪ್ರಜಾವಾಣಿ' ದಿನಪತ್ರಿಕೆಯ 'ಕಾಮನಬಿಲ್ಲು' ಪುರವಣಿಯಲ್ಲಿ ಈ ಹಿಂದೆ ಪ್ರಕಟವಾದ ಅವರ 'ಕ್ಲಾಸ್‌ಟೀಚರ್' ಎಂಬ ಅಂಕಣ ಅವರಿಗೆ ಜನಪ್ರಿಯತೆಯ ಜೊತೆಗೆ ಅಪಾರ ಓದುಗರನ್ನು ದೊರಕಿಸಿಕೊಟ್ಟಿತು. ಈ ಅಂಕಣ ಅದೇ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಪ್ರಸ್ತುತ ಅವರು ಶಿವಮೊಗ್ಗದಲ್ಲಿ ಕನ್ನಡ ಅಧ್ಯಾಪಕರು.